ಇಮಾಮಿ ಪೌಡರಿನ ಸುಗಂಧವೂ ಬರುತ್ತಿತ್ತು. ಮದುವೆ ದಿವಸ ಗಂಡಹೆಂಡತಿ ಹತ್ತಿರವಾಗಬೇಕೆಂದು ಧಾರ್ಮಿಕದಲ್ಲೇ ಇರುವ ನೀರಿನ ಕೊಡದಲ್ಲಿ ಯಾರು ಮೊದಲಿಗೆ ಉಂಗುರ ಹುಡುಕುತ್ತಾರೆ, ಯಾರು ಮೊದಲಿಗೆ ತೆಂಗಿನ ಕಾಯಿ ತುರಿಯುತ್ತಾರೆ, ಬಣ್ಣದ ನೀರಿನ ಚಡಂಗಗಳಂತೇ ಶಿರ್ಕ್ಯ ಏನೇನೋ ಒಂದೊಂದು ರಿವಾಜು ಒಡ್ಡುತ್ತಿದ್ದ. ಆಗೂ ಈಗೂ ಒಂದು ಜೋಕು, ಬಶೀರನ ಹೆಸರಿನಲ್ಲಿ ಎಷ್ಟು 'ಎಚ್' ಇದೆ ಹೇಳು ಎಂದು ಪಂಕಜನ ಹತ್ತಿರ ಕೇಳುವುದು, ಬಶೀರನ ಹತ್ತಿರ ಅವಳ ಬ್ಯಾಗಿನಲ್ಲಿ ಎಷ್ಟು ಕಾಂಡೋಮ್ ಇದೆ ಹೇಳು ಎನ್ನುವುದು, ಮಾಡುತ್ತಿದ್ದ. ನಿಜವಾಗಿಯೂ ಬಶೀರನಿಗೆ ಇವೆಲ್ಲ ಬೇಡಿದ್ದರೂ ಮಜವೇ ಆಗುತ್ತಿತ್ತು.

ನವರಂಗ ದಾಟಿ ಇ.ಎಸ್.ಐ ಹಾಸ್ಪಿಟಲ್ ಬರುವವರೆಗೆ ಎಲ್ಲರಿಗೂ ಪರಸ್ಪರ ಸಲಿಗೆಯಾಗಿ ನಾನು ಚಂದನೋ ಶಿರ್ಕ್ಯ ಚಂದನೂ ಹೇಳು ಎಂದು ಬಶೀರನೇ ಕೇಳುತ್ತಿದ್ದ. ಸುರುವಿನಿಂದಲೇ ಆಟೊ ಮಿರರ್ ಸರಿ ಮಾಡಿಕೊಳ್ಳುವುದು, ಸ್ವಲ್ಪ ಹೊತ್ತು ಎಡ ಕುಂಡೆಯ ಮೇಲೆ ಸ್ವಲ್ಪ ಹೊತ್ತು ಬಲಕುಂಡೆಯಮೇಲೆ ಕುಂತು ಆಟೊ ಓಡಿಸುತ್ತಿದ್ದ ಡ್ರೈವರ್ ಕಾರ್ಡ್‌ರೋಡಿನ ಭಾರತ್ ಪೆಟ್ರೋಲ್ ಬಂಕ್ ಹತ್ತಿರ ಬರುತ್ತಿದ್ದಂತೇ ಸೈಡಿಗೆ ಹಾಕಿ 'ಎಪ್ಪತ್ತು ರೂಪಾಯಿ ಕೊಡಿ ಸರ್, ಪೆಟ್ರೋಲ್ ಹಾಕಿಸಬೇಕು' ಎಂದ. ಪೆಟ್ರೋಲ್ ಹಾಕಿಸಿ ಗಾಳಿ ಹಾಕುವಲ್ಲಿ ನಿಲ್ಲಿಸಿದ. ಸುಮಾರು ಹೊತ್ತು ಕುಂತ ಶಿರ್ಕ್ಯ ಕೆಳಗಿಳಿದು ಹಿಂದೆ ನಿಂತಿದ್ದ ಡ್ರೈವರ್‌ನ ಹತ್ತಿರ 'ಸಾದಾ ಗಾಳಿನೋ ಅಥವಾ ಇದಕ್ಕೂ ನೈಟ್ರೋಜನ್ನೋ' ಮತ್ತೆ ಎಂದ. ಡ್ರೈವರ್ ಕೇಳಿದ್ದಕ್ಕೆಲ್ಲ ಉತ್ತರ ಕೊಡದೇ 'ಏನಣ್ಣಾ ಜೋರಾ... ಜೋರು ಮಜಾ ಮಾತಾಡ್ತಾ ಇದೀರಿ. ಎಲ್ಲಿ ಬಿಡಬೇಕೆಂದು ಹೇಳಿ ನಾನು ನಿಮ್ಮ ಹತ್ತಿರ ದುಡ್ಡು ಇಸ್ಕಳಲ್ಲ. ಫ್ರೀ...' ಎಂದ. ಯಾಕೆ ಫ್ರೀ ಅನ್ನುತ್ತಿದ್ದಾನೆ ಎನ್ನುವ ಸಂಶಯ ಮನಸ್ಸಿನಲ್ಲಿ ಅಂದುಕೊಳ್ಳುತ್ತಿದ್ದಂತೇ ಇಬ್ಬರೂ ಹತ್ತಿಕೊಂಡರು. ಇಬ್ಬರೂ ಅದರ ಸುದ್ದಿ ಎತ್ತಲಿಲ್ಲ. ಆದರೆ ಮೊದಲಿಗಿಂತ ಈಗ ಶಿರ್ಕ್ಯ ಸುಮ್ಮನಾಗಿದ್ದ. 'ಈ ಡ್ರೈವರ್ ನಿನಗೇನಾದರೂ ಗೊತ್ತಾ' ಎಂದು ಕಣ್ಣ ಸನ್ನೆಯಲ್ಲೇ ಪಂಕಜಳನ್ನು ಕೇಳಿದ್ದಕ್ಕೆ 'ನನಗೆ ಗೊತ್ತಿಲ್ಲ' ಎಂದಳು. ಆದರೂ ನಂಬಿಕೆ ಬರಲಿಲ್ಲ. ಫ್ರೀ ಎಂದು ಡ್ರೈವರನಿಂದ ಕೇಳಿದ ನಂತರ ಶಿರ್ಕ್ಯ ಹೆಚ್ಚು ಹೆಚ್ಚು ವಿಚಾರ ಮಾಡಲು ತೊಡಗಿದ. ಹುಟ್ಟಾ ಶಿರ್ಕ್ಯನ ನರನಾಡಿಗಳು ವಿಚಿತ್ರವಾಗಿ ಸೆನ್ಸರ್ ರೀತಿಯಲ್ಲಿ ಜಾಗೃತವಿದ್ದಿದ್ದರಿಂದ ಇಂದು ಅಷ್ಟು ಸರಳವಾಗಿ ಮುಗಿಯಲು ಸಾಧ್ಯವಿಲ್ಲವೆಂಬುದು ಖಾತ್ರಿಯಾಗಿತ್ತು. ಮೊದಲ ಪ್ಲಾನ್ ಪಂಕಜಳನ್ನು ವಿಜಯನಗರದಲ್ಲಿರುವ ಫ್ರೆಂಡ್ ಮನೆಗೆ ಈ ರಾತ್ರಿ ಕರೆದುಕೊಂಡು ಹೋಗುವದಿದ್ದರೂ ಏನೋ ಗಡಿ ಬಿಡಿ, ಆತಂಕವೆನಿಸಿ 'ಇಲ್ಲೇ ನಿಲ್ಲಿಸಿ' ಎಂದು ಆಟೊದವನಿಗೆ ಅಂದುಬಿಟ್ಟ.

ಆಗಲೇ ಪಂಕಜಳ ಹೊಟ್ಟೆಯನ್ನು ಬಳಸುತ್ತಿದ್ದ ಬಶೀರನಿಗೆ ಒಮ್ಮೇಲೆ ಎಚ್ಚರವಾಗಿ 'ಯಾಕೋ ನಮ್ಮ ಹಾಸ್ಟೆಲ್ ಎದುರು ನಿಲ್ಲಿಸಿದೆ' ಎಂದು ಕೇಳಿದ್ದಕ್ಕೆ 'ಲೌಡೆ ಮುಚ್ಚಿಕೊಂಡು ಇರ್ತೀಯಾ ಸ್ವಲ್ಪ ಹೊತ್ತು' ಎಂದ. ಇತ್ತಕಡೆ ಡ್ರೈವರ್ 'ಏನು?... ಹೇಳಿದ್ದೆಲ್ಲಿ... ನಿಲ್ಲಿಸಿದ್ದೆಲ್ಲಿ' ಎನ್ನುತ್ತಾ ಹೊರಬಂದ. ಆತಂಕದಿಂದಲೇ ಹೊರಬಂದ ಬಶೀರ, ಶಿರ್ಕ್ಯನ ಹತ್ತಿರ 'ಏನಾಯಿತು ಏನಾಯಿತು' ಎಂದಿದ್ದಕ್ಕೆ 'ಪಂಕಜಳ ಕರೆದುಕೊಂಡು ಸ್ವಲ್ಪ ಮುಂದೆ ಹೋಗಿ ನಿಂತುಕೊ, ಬರುತ್ತೇನೆ' ಎಂದ. ಶಿರ್ಕ್ಯ ಡ್ರೈವರನ ಕಡೆ ನಡೆದ. 'ಆಟೊ ಚಾರ್ಜ್ ಫ್ರೀ ಎಂದು ಹೇಳಿಕೊಂಡು ನಮ್ಮ ಜೊತೆ ಬರೋ ಹಳೆ ಟ್ರಿಕ್ ಬೇಡ ಮಗಾ. ಹಣ ತಗೊಂಡು ಹೊಯ್ತಾನೇ ಇರಬೇಕು, ಇದು ನಮ್ಮ ಏರಿಯಾ' ಎನ್ನುತ್ತ ಉಳಿದ ಅರವತ್ತು ರೂಪಾಯಿ ಅವನ ಸೀಟಿನ ಮೇಲೆ ಇಟ್ಟು ಹೊರಟುಬಿಟ್ಟ. ಸುಮಾರು ಹೊತ್ತಿನವರೆಗೂ ಆಟೊದವನು ಇವರನ್ನು ದೂರದಿಂದ ನೋಡುತ್ತಿದ್ದರೆ, ಶಿರ್ಕ್ಯನೂ ಅವ ಹೋಗುವವರೆಗೆ ಹಂದಾಡಲಿಲ್ಲ.